# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1027
ಸದಸ್ಯರ ಹೆಸರು : ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ಸಚಿವರು : ಕಂದಾಯ ಸಚಿವರು
ಉತ್ತರಿಸುವ ದಿನಾಂಕ : 18.12.2024

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ರೈತರು ಹಾಗೂ ಇನ್ನಿತರೆ ಮಾಲೀಕರ ಹೆಸರಿನಲ್ಲಿ ಬರುತ್ತಿದ್ದ ಪಹಣಿಯನ್ನು (ಆರ್.ಟಿ.ಸಿ. ಯನ್ನು) ಸರ್ಕಾರ 2023 ರಿಂದ ಇಲ್ಲಿಯವರೆಗೆ ಎಷ್ಟು ರೈತರ ಜಮೀನಿನ ಆರ್.ಟಿ.ಸಿ ಯನ್ನು ವಕ್ಫ್ ಬೋರ್ಡು ಹೆಸರಿಗೆ ಬದಲಾವಣೆ ಮಾಡಲಾಗಿದೆ; (ತಾಲ್ಲೂಕುವಾರು ಆರ್.ಟಿ.ಸಿ.ದಾರರ ಪೂರ್ಣ ಮಾಹಿತಿ ನೀಡುವುದು). | ರಾಜ್ಯದಲ್ಲಿ 2023ರಿಂದ ಇಲ್ಲಿಯವರೆಗೆ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಹುನಗುಂದ ಗ್ರಾಮದ ರಿ.ಸ.ನಂ.457/ಆ/2ರ ಕಾಲಂ ನಂ.9 ರಲ್ಲಿ ದಿನಾಂಕ:21.12.2023ರಂದು ಹಜರತ ಮಲಂಗ ಷಾವಲಿ ದರ್ಗಾ ಮಸೀದಿ ಹಾಗೂ ಖಬರಸ್ಥಾನ ಸುನ್ನಿ ಎಂದು ದಾಖಲಾಗಿರುತ್ತದೆ.<br><br>ಇನ್ನುಳಿದಂತೆ ಈ ಕೆಳಕಂಡ ಜಿಲ್ಲೆಗಳಲ್ಲಿ ಪಹಣಿ ಕಾಲಂ 11ರಲ್ಲಿ ಮಾತ್ರ ವಕ್ಫ್ ಬೋರ್ಡ್ ಎಂದು ನಮೂದು ಮಾಡಲಾಗಿದ್ದು. ರೈತರ ಜಮೀನಿನ ಆರ್.ಟಿ.ಸಿ.ಯನ್ನು ವಕ್ಫ್ ಬೋರ್ಡ್ ಹೆಸರಿಗೆ ಬದಲಾವಣೆ ಮಾಡಿರುವುದು ಕಂಡುಬಂದಿರುವುದಿಲ್ಲ. |

| ಕ್ರ.ಸಂ | ಜಿಲ್ಲೆಯ ಹೆಸರು | ಪಹಣಿ ಕಾಲಂ 11 ರಲ್ಲಿ ವಕ್ಫ್ ಬೋರ್ಡ್ ಎಂದು ನಮೂದಿಸಿರುವ ಪ್ರಕರಣಗಳ ಸಂಖ್ಯೆ |
|---|---|---|
| 1. | ವಿಜಯಪುರ | 42 |
| 2. | ಹಾವೇರಿ | 208 |
| 3. | ಕೊಪ್ಪಳ | 10 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಆ) | ರೈತರು ಹಾಗೂ ಇನ್ನಿತರರ ಹೆಸರಿನಲ್ಲಿ ಬರುತ್ತಿದ್ದ ಪಹಣಿ (ಆರ್.ಟಿ.ಸಿ ಯನ್ನು ವಕ್ಫ್ ಬೋರ್ಡು ಹೆಸರಿಗೆ ಬದಲಾವಣೆ ಮಾಡಲು ಸರ್ಕಾರ ಯಾವ ದಾಖಲೆಗಳ ಆಧಾರದ ಮೇಲೆ ಮತ್ತು ಯಾವ ನಿಯಮದ ಮೇಲೆ ಬದಲಾವಣೆ ಮಾಡಲಾಗಿದೆ; | ವಕ್ಫ್ ಅಧಿಸೂಚನೆ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ:ಎಂಡಬ್ಲ್ಯೂಡಿ 2 ಡಬ್ಲ್ಯೂಇಎಸ್ 2009. ದಿನಾಂಕ:29.05.2010 ಮತ್ತು ಸುತ್ತೋಲೆ ಸಂಖ್ಯೆ:ಆರ್‌ಡಿ 48 ಎಲ್‌ಜಿಪಿ 2016 ದಿನಾಂಕ:28.10.2016ರನ್ವಯ ವಕ್ಫ್ ಎಂದು ನಮೂದಿಸಲಾಗಿದೆ. |

| | | |
|---|---|---|
| (ಇ) | ಈ ರೀತಿ ವಕ್ಫ್ ಬೋರ್ಡ್ ಹೆಸರಿಗೆ ಆರ್.ಟಿ.ಸಿ ಯನ್ನು ಬದಲಾವಣೆ ಮಾಡಿ ನಂತರ ಸರ್ಕಾರ ಈ ಆದೇಶವನ್ನು ಹಿಂಪಡೆದು ಮೂಲ ಮಾಲೀಕರ ಹೆಸರಿಗೆ ಆರ್.ಟಿ.ಸಿಯನ್ನು ಬದಲಾವಣೆ ಮಾಡಲು ಕ್ರಮ ತೆಗೆದುಕೊಂಡಿದೆಯೇ ? | ಸರ್ಕಾರದ ಪತ್ರ ಸಂಖ್ಯೆ:ಕಂಇ 99 ಟಿಆರ್‌ಎಂ 2024, ದಿನಾಂಕ:09.11.2024ರಲ್ಲಿ ಈಗಾಗಲೇ ನೀಡಿರುವ ನೋಟಿಸ್‌ಗಳನ್ನು ಹಿಂದಕ್ಕೆ ಪಡೆಯುವ ಕುರಿತಂತೆ ಈ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿರುತ್ತದೆ:<br>1. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮ್ಯುಟೇಷನ್ ಮಾಡಲು ಯಾವುದೇ ಕಛೇರಿ ಅಥವಾ ಯಾವುದೇ ಪ್ರಾಧಿಕಾರದಿಂದ ನೀಡಲಾದ ನಿರ್ದೇಶನಗಳನ್ನು ತಕ್ಷಣದಿಂದಲೇ ಹಿಂಪಡೆಯುವುದು ಹಾಗೂ ಮ್ಯುಟೇಷನ್ ಪ್ರಕ್ರಿಯೆಯನ್ನು ಕೂಡಲೇ ಸ್ಥಗಿತಗೊಳಿಸುವುದು;<br>2. ಈ ಕುರಿತು ನೀಡಲಾದ ಎಲ್ಲಾ ನೋಟೀಸುಗಳನ್ನು ಹಿಂಪಡೆಯುವುದು;<br>3. ಸದರಿ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿರುವ ರೈತರುಗಳ ವಿರುದ್ಧ ಯಾವುದೇ ಕ್ರಮವನ್ನು ಜರುಗಿಸತಕ್ಕದಲ್ಲ. |

**ಸಂ: ಕಂಇ 269 ಟಿಆರ್‌ಎಂ 2024 (1617998)**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು